

ತಲುಪಬೇಕಾದರೆ ಸುಮಾರು ಒಂದೂವರೆ ಕಿ.ಮೀ. ನಡೆದೇ ಹೋಗಬೇಕು. 100 ಮೀಟರ್ ಆಳಕ್ಕೆ ಧುಮುಕುವ ಜಲಪಾತ. ಪೌಲನಾಸ್ ಎಂಬ ಹೆಸರು ಐರಿಸ್ ಭಾಷೆಯ 'ಪೌಲ್ ಎ ಇಸ್' ಪದದಿಂದ ಬಂದಿದೆ. ಅಂದರೆ ಜಲಪಾತ ಕುಳಿ ಎಂದರ್ಥ. ದಟ್ಟ ಅರಣ್ಯದ ನಡುವಿನಿಂದ ನೀರು ಕಣಿಗೆ ಧುಮುಕುತ್ತದೆ. ಈ ಅರಣ್ಯ ಪ್ರದೇಶದಲ್ಲಿ ಹತ್ತಾರು ಜಾತಿಯ ಪಕ್ಷಿಸಂಕುಲ ವಾಸವಿದೆ. ಅರಣ್ಯದ ಮಧ್ಯೆ ಸ್ಥಳೀಯ ಪ್ರವಾಸಿಗರು, ಹಿರಿಯ ನಾಗರಿಕರು ಬೆಟ್ಟವನ್ನೇರಿ ಇಳಿಯುವ ಪರಿಪಾಠ ಇಲ್ಲಿ ಸಾಮಾನ್ಯ. ಬಲಭಾಗದಲ್ಲಿ ದಟ್ಟ ಕಾಡು, ಎಡಭಾಗದಲ್ಲಿ ಆಳಕ್ಕೆ ಸರೋವರ– ಇವುಗಳ ನಡುವಣ ಚಾರಣ ಅತೀವ ಆನಂದ ಉಂಟು ಮಾಡುತ್ತದೆ.

ಉದ್ಯಾನವನದ ಮಾಹಿತಿ ತಿಳಿಸುವ ಮಾಹಿತಿ ಕೇಂದ್ರವೊಂದು ಅಲ್ಲೇ ಕಾಣಸಿಗುತ್ತದೆ. ಮುಂದೆ ಸಾಗಿದರೆ ಮಾನಸ್ಟಿಕ್ ಸಿಟಿಗೆ (ಕ್ರೈಸ್ತ ಸನ್ಯಾಸಿ ನಗರ) ಮಾರ್ಗ ಫಲಕ ಕಾಣುತ್ತದೆ. ಅಲ್ಲಿಗೆ ಹೋದರೆ ಪ್ರಾಚೀನ ಕ್ರೈಸ್ತ ಸನ್ಯಾಸಿಗಳ ನಗರದ ಅವಶೇಷಗಳು ಕಾಣಸಿದವು. ಈ ನಗರಕ್ಕೆ ಸುತ್ತಲೂ ವೃತ್ತಾಕಾರದ ಕೋಟೆ ಇದ್ದಂತೆ ಅವಶೇಷಗಳು ಕಂಡುಬರುತ್ತವೆ.

## ಕ್ರೈಸ್ತ ಸನ್ಯಾಸಿ ನಗರ

ಗ್ಲೆಂಡಾಲೋಫ್ ಕಣಿವೆಯಲ್ಲಿರುವ ಪ್ರಾಚೀನ ಕ್ರೈಸ್ತ ಸನ್ಯಾಸಿಗಳ ನಗರದ ಸುತ್ತ ವೃತ್ತಾಕಾರವಾದ ಕೋಟೆ ಇತ್ತಂತೆ. ಕೋಟೆಯ ಪ್ರವೇಶದ್ವಾರ ಗೇಟ್‌ವೇಗೆ ಎರಡು ಬದಿಗಳಲ್ಲಿ ಮುಖಗಳಿವೆ. ಈ ಕೋಟೆ ಹಾಗೂ ದ್ವಾರವನ್ನು ಕ್ರಿ.ಶ. 900ರಿಂದ 1200ರ ಅವಧಿಯಲ್ಲಿ ನಿರ್ಮಿಸಲಾಗಿದೆ ಎನ್ನಲಾಗುತ್ತಿದೆ. 17ನೇ ಶತಮಾನದವರೆಗೂ ಹಲವು ದೊರೆಗಳ ದಾಳಿಗೆ ಒಳಗಾಗಿ ಕೋಟೆ ನಾಶವಾಗಿದ್ದರೂ, ಮತ್ತೆ ಪುನರ್‌ನಿರ್ಮಾಣಗೊಂಡಿದೆ. ಮುಂದೆ ಸಾಗಿದರೆ ಮಾನಸ್ಟಿಕ್ ಸಿಟಿಯ ಅವಶೇಷಗಳು ಕಾಣಸಿಗುತ್ತವೆ.

ಕ್ರಿ.ಶ. ಆರನೇ ಶತಮಾನದಲ್ಲಿ ಸೇಂಟ್ ಕೆವಿನ್ ಎಂಬಾತ ಇಲ್ಲಿ ಕ್ರೈಸ್ತ ಮಠವನ್ನು ಸ್ಥಾಪಿಸಿದನು. ಮುಂದಿನ ದಿನಗಳಲ್ಲಿ ಅದು ಅಭಿವೃದ್ಧಿ ಹೊಂದಿತು. ಇಲ್ಲಿ ನಿರ್ಮಾಣಗೊಂಡಿದ್ದ ಚರ್ಚ್‌ನಲ್ಲಿ ಶಾಲೆಯೊಂದನ್ನು ಸ್ಥಾಪಿಸಲಾಗಿತ್ತು. ಸೇಂಟ್ ಕೆವಿನ್ ಸ್ಥಾಪಿಸಿದ ಚರ್ಚ್, ಆತ ವಾಸವಾಗಿದ್ದ ಮನೆ, ಅಡುಗೆ ಮನೆ, ಅವಶೇಷಗಳೂ ಕಾಣಸಿಗುತ್ತವೆ. ಜತೆಗೆ ಕ್ರೈಸ್ತ





ಮೇಲಿನ ಸರೋವರದ ನೋಟ (ಲೇಖಕನ ಜೊತೆ ಮಗಳು ಮತ್ತು ಪತ್ನಿ)

ಸನ್ಯಾಸಿಗಳ ಸಮಾಧಿಗಳ ಶಿಲುಬೆಗಳೂ ಇಲ್ಲಿವೆ. 30 ಮೀಟರ್ ಎತ್ತರದ ರೌಂಡ್ ಟವರ್ ಇಲ್ಲಿನ ಮುಖ್ಯ ಆಕರ್ಷಣೆ. ಇದು ಐರ್ಲೆಂಡಿನ ಅತ್ಯಂತ ಪುರಾತನ ಕ್ರೈಸ್ತ ಸನ್ಯಾಸಿಗಳ ನಗರವಾಗಿದ್ದು, ಅಂದಿನ ಕಾಲದ ದೊಡ್ಡ ಕಲಿಕಾ ಕೇಂದ್ರವೂ ಆಗಿತ್ತು. ಆದರೆ, ಕ್ರಿ.ಶ.1214ರ ವೇಳೆಯಲ್ಲಿ ನಾರ್ಮನ್ನರ ದಾಳಿಗೆ ಸಿಲುಕಿ ಈ ನಗರ ನಾಶವಾಗಿದೆ. ಆದರೂ 17ನೇ ಶತಮಾನದವರೆಗೂ ಪ್ರವರ್ಧಮಾನದಲ್ಲಿ ಇತ್ತೆಂದು ತಿಳಿದುಬರುತ್ತದೆ.

ಈ ಪುರಾತನ ಕ್ರೈಸ್ತ ಸನ್ಯಾಸಿ ಅವಶೇಷ ನಗರ ನೋಡಿ ಮುಂದೆ ಕೆಳಗಿನ ಸರೋವರಕ್ಕೆ ಸೇರಿಕೊಂಡಂತೆ ಮರದ ಹಲಗೆಯ ಮೇಲೆ ನಡೆದು ಹೋಗಲು ವ್ಯವಸ್ಥೆ ಇದೆ. ಈ ಕಾಲುದಾರಿಯಲ್ಲಿ ನಡೆದು ಹೋಗುವಾಗ ಒಂದು ಕಡೆ ಸರೋವರ, ಮತ್ತೊಂದೆಡೆ ಅಷ್ಟೇನೂ ದಟ್ಟವಲ್ಲದ ಮರಗಳ ಶ್ರೇಣಿ ಕಾಣುತ್ತದೆ. ಅವುಗಳ ಮಧ್ಯೆ ಕಾಲುನಡಿಗೆ ಚೇತೋಹಾರಿ ಅನುಭವ. ಮುಂದೆ ನಡೆದರೆ ಅರಣ್ಯದ ನಡುವೆ ಸಾಗಿ ಪ್ರವಾಸಿಗರ ವಿಶ್ರಾಂತಿಗಾಗಿ ನಿರ್ಮಿಸಿರುವ ಹೋಟೆಲ್‌ಗಳು ಸಿಗುತ್ತವೆ. ●